# ಯಾಜ್ಞವಲ್ಕ್ಯನ ವಿಜಯ

## (ಬೃಹದಾರಣ್ಯಕೋಪನಿಷತ್ತು - ೨)

ಸ್ವಾಮಿ ವೀರೇಶಾನಂದ

**ಯಾ**ಜ್ಞವಲ್ಕ್ಯನು ಹಲವಾರು ವಿದ್ವಾಂಸರ ಜೊತೆಗೆ ವಾದವನ್ನು ಮಾಡುತ್ತಿದ್ದಾನೆ. ಕಹೋಲ ಕೌಷೀತಕೇಯನು ಅವನ ಜೊತೆಗೆ ವಾದ ಮಾಡಿ ಹಿಂಜರಿದನು. ಅನಂತರ ಗಾರ್ಗಿಯೆಂಬ ಬ್ರಹ್ಮವಾದಿನಿಯು ಎದ್ದುನಿಂತಳು. ಯಾಜ್ಞವಲ್ಕ್ಯನಿಗೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದಳು.

### ಗಾರ್ಗಿಯ ಪ್ರಶ್ನೆ

ಗಾರ್ಗಿಯ ಪೂರ್ಣ ಹೆಸರು ಗಾರ್ಗಿ ವಾಚಕ್ನವಿ. ಅವಳು ಯಾಜ್ಞವಲ್ಕ್ಯನನ್ನು ಕೇಳಿದಳು:

''ಯಾಜ್ಞವಲ್ಕ್ಯನೆ, ಜಗತ್ತಿನಲ್ಲಿ ಇರುವ ಎಲ್ಲವೂ ನೀರಿನಲ್ಲಿ ಓತಪ್ರೋತವಾಗಿದೆ. ಓತವೆಂದರೆ ಬಟ್ಟೆಯ ಉದ್ದನೆಯ ನೂಲುಗಳಂತೆ ಹಾಸಾಗಿರುವುದು. ಪ್ರೋತವೆಂದರೆ ಅಡ್ಡನೂಲುಗಳಂತೆ ಹೊಕ್ಕಾಗಿರುವುದು. ಹೀಗಾಗಿ ನೀರು ಜಗತ್ತಿನ ಎಲ್ಲ ಧಾತುಗಳಲ್ಲಿಯೂ ಹಾಸುಹೊಕ್ಕಾಗಿರುವುದು. ಅಂದರೆ, ಎಲ್ಲವೂ ನೀರಿನಿಂದ ವ್ಯಾಪ್ತವಾಗಿದೆ. ಇಲ್ಲದಿದ್ದರೆ, ಇಡಿಯ ಜಗತ್ತು ಹಿಟ್ಟಿನ ಹಿಡಿಯಂತೆ ಒಡೆದು ಚೆಲ್ಲಿಹೋಗಬಹುದು. ಇದಲ್ಲದೆ, ಪೃಥ್ವಿಗೆ ಕಾರಣವಾಗಿರುವುದು ಅಪ್ಪು ಅಥವಾ ನೀರು. ಇಷ್ಟು ಅಲ್ಲದೆ, ಅಪ್ಪು ಅಥವಾ ನೀರು ಪೃಥ್ವಿಗಿಂತಲೂ ಸೂಕ್ಷ್ಮವಾಗಿರುತ್ತದೆ. ಯಾಜ್ಞವಲ್ಕ್ಯನೇ, ಹೀಗಿರುವಾಗ, ನೀರು ಅಥವಾ ಅಪ್ಪು ಯಾವುದರಲ್ಲಿ ಹಾಸುಹೊಕ್ಕಾಗಿದೆ?''

**ಯಾಜ್ಞವಲ್ಕ್ಯ :** ಗಾರ್ಗಿ, ವಾಯುವು ನೀರಿನಲ್ಲಿ ಹಾಸುಹೊಕ್ಕಾಗಿದೆ.

**ಗಾರ್ಗಿ:** ವಾಯುವು ಏತರಲ್ಲಿ ಹಾಸುಹೊಕ್ಕಾಗಿದೆ?

**ಯಾಜ್ಞವಲ್ಕ್ಯ :** ಅಂತರಿಕ್ಷಲೋಕದಲ್ಲಿ.


**ಗಾರ್ಗಿ:** ಅಂತರಿಕ್ಷಲೋಕವು ಯಾವುದರಲ್ಲಿ ಹಾಸುಹೊಕ್ಕಾಗಿದೆ?

**ಯಾಜ್ಞವಲ್ಕ್ಯ :** ಗಂಧರ್ವಲೋಕದಲ್ಲಿ.

**ಗಾರ್ಗಿ:** ಗಂಧರ್ವಲೋಕವು ಯಾವುದರಲ್ಲಿ ಹಾಸುಹೊಕ್ಕಾಗಿದೆ?

**ಯಾಜ್ಞವಲ್ಕ್ಯ :** ಆದಿತ್ಯಲೋಕದಲ್ಲಿ.

**ಗಾರ್ಗಿ:** ಆದಿತ್ಯಲೋಕವು ಏತರಲ್ಲಿ ಹಾಸುಹೊಕ್ಕಾಗಿದೆ?



**ಯಾಜ್ಞವಲ್ಕ್ಯ :** ಚಂದ್ರಲೋಕದಲ್ಲಿ.

**ಗಾರ್ಗಿ:** ಚಂದ್ರಲೋಕವು ಯಾವುದರದಲ್ಲಿ ಓತಪ್ರೋತವಾಗಿದೆ?

**ಯಾಜ್ಞವಲ್ಕ್ಯ :** ನಕ್ಷತ್ರಲೋಕದಲ್ಲಿ.

**ಗಾರ್ಗಿ:** ನಕ್ಷತ್ರಲೋಕವು ಏತರಲ್ಲಿ ಹಾಸುಹೊಕ್ಕಾಗಿದೆ?

**ಯಾಜ್ಞವಲ್ಕ್ಯ :** ದೇವಲೋಕದಲ್ಲಿ.

**ಗಾರ್ಗಿ:** ದೇವಲೋಕವು ಯಾವುದರಲ್ಲಿ ಓತಪ್ರೋತವಾಗಿದೆ?

**ಯಾಜ್ಞವಲ್ಕ್ಯ :** ಇಂದ್ರಲೋಕದಲ್ಲಿ.

**ಗಾರ್ಗಿ:** ಇಂದ್ರಲೋಕವು ಯಾವುದರಲ್ಲಿ ಹಾಸುಹೊಕ್ಕಾಗಿದೆ?

**ಯಾಜ್ಞವಲ್ಕ್ಯ :** ಪ್ರಜಾಪತಿ ಲೋಕದಲ್ಲಿ.

**ಗಾರ್ಗಿ:** ಪ್ರಜಾಪತಿ ಲೋಕವು ಯಾವುದರಲ್ಲಿ ಓತಪ್ರೋತವಾಗಿದೆ?

**ಯಾಜ್ಞವಲ್ಕ್ಯ :** ಬ್ರಹ್ಮಲೋಕದಲ್ಲಿ.

**ಗಾರ್ಗಿ:** ಬ್ರಹ್ಮಲೋಕವು ಏತರಲ್ಲಿ ಓತಪ್ರೋತವಾಗಿದೆ?

**ಯಾಜ್ಞವಲ್ಕ್ಯ :** ಗಾರ್ಗಿ, ನಿನ್ನ ಈ ಪ್ರಶ್ನೆಯು ತರ್ಕಕ್ಕೆ ಮೀರಿದ್ದು. ತರ್ಕಕ್ಕೆ ಮೀರಿದ ಪರತತ್ತ್ವವನ್ನು ತರ್ಕದ ಮೂಲಕ ವಿಚಾರ ಮಾಡಲು ನೀನು ಪ್ರಯತ್ನಿಸುತ್ತಿದ್ದೀಯೆ. ಇಂಥ ಪ್ರಶ್ನೆಯಿಂದ ನೀನು ನಿನ್ನ ಗೌರವವನ್ನು ಕಳೆದುಕೊಳ್ಳುತ್ತೀಯೆ. ಹಾಗೆ ಮಾಡದಿರು.

ಆಗ ಗಾರ್ಗಿ ವಾಚಕ್ನವಿಯು ವಾದದಿಂದ ಹಿಂದೆ ಸರಿದಳು.

ಈ ಕಥೆಯ ಅರ್ಥವೇನು? ಉಪನಿಷತ್ತಿನ ಪ್ರಕಾರ, ಬ್ರಹ್ಮಲೋಕ ಅಥವಾ ಹಿರಣ್ಯಗರ್ಭಲೋಕವು ಅತ್ಯಂತ ಸೂಕ್ಷ್ಮವಾದ ಭೌತಿಕ ಲೋಕ. ಅದು ಬೇರೆಲ್ಲ ಲೋಕಗಳನ್ನೂ ವ್ಯಾಪಿಸಿದೆ. ಈ ಬ್ರಹ್ಮಲೋಕವನ್ನೂ ವ್ಯಾಪಿಸಿರುವುದು ಯಾವುದು? ಅದನ್ನು ಸಾಧಾರಣ ಮಾನವ ಬುದ್ಧಿಯಿಂದ ಚಿಂತಿಸಲು ಸಾಧ್ಯವಿಲ್ಲ. ಏಕೆಂದರೆ ಅದು ವಾಕ್ಕು, ಮನಸ್ಸು, ಬುದ್ಧಿಗಳನ್ನು ಮೀರಿದ ಪರತತ್ತ್ವವಾಗಿದೆ. ಅದನ್ನು ಗುರುಗಳ ಉಪದೇಶದಿಂದ ನೇರವಾಗಿ ಪಡೆದುಕೊಳ್ಳಬೇಕು. ಇದನ್ನು ಗಾರ್ಗಿಯು ಅರ್ಥಮಾಡಿಕೊಂಡಳು. ಹಾಗೆಂದೇ ಸುಮ್ಮನಾದಳು.

### ಉದ್ದಾಲಕ ಆರುಣಿಯ ಪ್ರಶ್ನೆ

ಅನಂತರ, ಉದ್ದಾಲಕ ಆರುಣಿಯು ಎದ್ದುನಿಂತು, ಯಾಜ್ಞವಲ್ಕ್ಯನನ್ನು ಪ್ರಶ್ನಿಸಿದನು: ಯಾಜ್ಞವಲ್ಕ್ಯನೇ, ನಿನಗೆ ನಾನು ಪ್ರಶ್ನೆಯನ್ನು ಕೇಳುವ ಮೊದಲು ನನ್ನ ಒಂದು ಅನುಭವವನ್ನು ಹೇಳುತ್ತೇನೆ, ಕೇಳು. ನಾನು ಮತ್ತು ನನ್ನ ಕೆಲವರು ಸಹಪಾಠಿಗಳು ಮದ್ರಪ್ರದೇಶಕ್ಕೆ ಹೋಗಿದ್ದೆವು. ಅಲ್ಲಿ, ಪತಂಜಲ ಕಾಪ್ಯ ಎನ್ನುವ ಆಚಾರ್ಯನ ಮನೆಯಲ್ಲಿ ಯಜ್ಞಶಾಸ್ತ್ರವನ್ನು ನಾವೆಲ್ಲ ಅಧ್ಯಯನ ಮಾಡುತ್ತಿದ್ದೆವು. ಅಲ್ಲಿ ಒಬ್ಬ ಗಂಧರ್ವನು ಕೂಡ ಇದ್ದನು. ''ನೀನು ಯಾರು?'' ಎಂದು ಅವನನ್ನು ನಾನು ಕೇಳಿದೆನು. ''ನನ್ನ ಹೆಸರು, ಕಬಂಧ ಅಥರ್ವಣ'' ಎಂದು ಆ ಗಂಧರ್ವನು ಹೇಳಿದನು.

ಆ ಗಂಧರ್ವನು ಪತಂಜಲ ಕಾಪ್ಯನನ್ನೂ ಮತ್ತು ಇತರ ಯಾಜ್ಞಿಕರನ್ನೂ ಒಂದು ಪ್ರಶ್ನೆಯನ್ನು ಕೇಳಿದನು: ''ಕಾಪ್ಯನೇ, ಈ ಲೋಕ, ಪರಲೋಕ ಮತ್ತು ಸರ್ವಜೀವಿಗಳೂ ಯಾವುದರಿಂದ ಹಿಡಿಯಲ್ಪಟ್ಟಿದೆಯೋ, ಆ ಸೂತ್ರವನ್ನು ನೀನು ಬಲ್ಲೆಯಾ?'' ಪತಂಜಲ ಕಾಪ್ಯನು ವಿನಯದಿಂದ ಹೇಳಿದನು: ''ಭಗವಂತನೇ, ನಾನು ಅದನ್ನು ಅರಿತುಕೊಂಡಿಲ್ಲ.'' ಹಾಗೆಯೇ ಆ ಗಂಧರ್ವನು ಇನ್ನೊಂದು ಪ್ರಶ್ನೆಯನ್ನು ಕೇಳಿದನು: ''ಕಾಪ್ಯನೇ, ಈ ಲೋಕವನ್ನೂ, ಪರಲೋಕವನ್ನೂ, ಸರ್ವಜೀವಿಗಳನ್ನೂ ಒಳಗಿದ್ದುಕೊಂಡು ಯಾರು ಆಳುತ್ತಿರುವನೋ, ಆ ಅಂತರ್ಯಾಮಿಯನ್ನು ನೀನು ಬಲ್ಲೆಯಾ?'' ಆಗ ಪತಂಜಲ ಕಾಪ್ಯನು ಹೇಳಿದನು, ''ಭಗವಂತನೇ ಅದನ್ನು ನಾನು ಅರಿಯೆನು.''

ಅನಂತರ ಕಬಂಧ ಅಥರ್ವಣನೆಂಬ ಆ ಗಂಧರ್ವನು ಆ ಮನೆಯಲ್ಲಿದ್ದ ಯಾಜ್ಞಿಕರೆಲ್ಲರನ್ನೂ ಕುರಿತು ಹೀಗೆ ಹೇಳಿದನು: ''ಕಾಪ್ಯನೇ, ಯಾರು ಸೂತ್ರವನ್ನು ಮತ್ತು ಅಂತರ್ಯಾಮಿಯನ್ನು ತಿಳಿದುಕೊಂಡಿರುತ್ತಾರೋ, ಅವನೇ ಬ್ರಹ್ಮವಿದನು; ಅವನೇ ಲೋಕವನ್ನು ತಿಳಿದುಕೊಂಡವನು; ಅವನೇ ವೇದವಿದನು; ಅವನೇ ದೇವತೆಗಳನ್ನು ಕೂಡ ತಿಳಿದನು; ಅವನೇ ಎಲ್ಲ ಸರ್ವಭೂತಗಳನ್ನೂ ತಿಳಿದವನು, ಅವನೇ ಆತ್ಮವಿದನು, ಅವನೇ ಸರ್ವವನ್ನೂ, ಎಲ್ಲವನ್ನೂ ತಿಳಿದವನು.''

ಆಗ ನಾವೆಲ್ಲರೂ ಆ ಗಂಧರ್ವನನ್ನು ಪ್ರಾರ್ಥಿಸಿಕೊಂಡೆವು: ''ದಯವಿಟ್ಟು, ಆ ಸೂತ್ರವನ್ನೂ ಹಾಗೆಯೇ, ಅಂತರ್ಯಾಮಿಯನ್ನೂ ನಮಗೆ ಉಪದೇಶಿಸು'' ಎಂದು. ಅದನ್ನು ಅವನು ನಮಗೆ ಹೇಳಿಕೊಟ್ಟನು.

''ಎಲೈ ಯಾಜ್ಞವಲ್ಕ್ಯನೇ, ನೀನು ಬ್ರಹ್ಮವಿದನಿಗೆ ಮುಡಿಪಾಗಿರುವ ಗೋವುಗಳನ್ನು ಹೊಡೆದುಕೊಂಡು ಹೋಗಿರುವೆ. ಏನಯ್ಯ, ಸೂತ್ರವನ್ನೂ, ಅಂತರ್ಯಾಮಿಯನ್ನು ನೀನು ತಿಳಿದಿರುವೆಯೇನು? ಅದನ್ನು ಅರಿಯದೆ ನೀನು ಗೋವುಗಳನ್ನು ಸುಮ್ಮಸುಮ್ಮನೆ ಹೊಡೆದುಕೊಂಡು ಹೋಗಿದ್ದರೆ, ನಿನ್ನ ತಲೆಯೇ ಬಿದ್ದುಹೋಗಲಿ.''

ಉದ್ದಾಲಕ ಆರುಣಿಯ ಈ ಸವಾಲನ್ನು ಯಾಜ್ಞವಲ್ಕ್ಯನು ಧೈರ್ಯದಿಂದ ಸ್ವೀಕರಿಸಿದನು. ''ಗೌತಮನೇ, ನೀನು ಯಾವುದರ ಬಗ್ಗೆ ಹೇಳುತ್ತಿರುವೆಯೋ, ಆ ಸೂತ್ರವನ್ನೂ, ಅಂತರ್ಯಾಮಿಯನ್ನೂ ನಾನು ಬಲ್ಲೆನು'' ಎಂದನು.

ಅದಕ್ಕೆ ಉದ್ದಾಲಕ ಆರುಣಿಯು ತಿರಸ್ಕಾರದಿಂದ ಅಪಹಾಸ್ಯ ಮಾಡುತ್ತ ನುಡಿದನು: ''ಯಾವ ದಾರಿಹೋಕನು ಬೇಕಾದರೂ, 'ನಾನು ಬಲ್ಲೆ, ನಾನು ಬಲ್ಲೆ' ಎಂದು ಹೇಳಿಯಾನು. ಅದೇನು ನೀನು ಬಲ್ಲೆಯೋ, ಹಾಗೆಯೇ ಹೇಳು.'' ಇದಕ್ಕೆ ಉತ್ತರವಾಗಿ ಯಾಜ್ಞವಲ್ಕ್ಯನು ಸೂತ್ರವನ್ನೂ, ಅಂತರ್ಯಾಮಿಯನ್ನೂ ಆ ತುಂಬಿದ ಸಭೆಯನ್ನು ವಿವರಿಸಿ ಹೇಳಿದನು.

### ಸೂತ್ರವೆಂದರೇನು?

ಯಾಜ್ಞವಲ್ಕ್ಯನು ಮುಂದುವರಿದು ಹೇಳಿದನು: ''ಆಕಾಶದಂತೆ ಸೂಕ್ಷ್ಮವಾಗಿ ಪೃಥಿವೀ ಮುಂತಾದ ಎಲ್ಲ ಲೋಕಗಳನ್ನೂ ಎತ್ತಿಹಿಡಿದಿರುವ ತತ್ತ್ವವೊಂದಿದೆ. ಇದನ್ನ 'ವಾಯು' ಎಂದು ಕರೆಯುತ್ತಾರೆ. ಇದು ಪ್ರಾಣಿಗಳ ಕರ್ಮಕ್ಕೂ ಆಶ್ರಯವಾಗಿರುವ ತತ್ತ್ವ. ಇದು ಸಮಷ್ಟಿಯಲ್ಲೂ ವ್ಯಷ್ಟಿಯಲ್ಲೂ ಓತಪ್ರೋತವಾಗಿರುತ್ತದೆ. ಇದು ಶಾಂತ ಸಮುದ್ರದಂತೆ ಇರುತ್ತದೆ. ಜಗತ್ತಿನ ಎಲ್ಲ ಪದಾರ್ಥಗಳೂ ಅದರ ಅಲೆಗಳಂತೆ ಇರುತ್ತದೆ. ಇದಕ್ಕೆ ಸೂತ್ರವೆಂಬ ಹೆಸರು ಬಂದಿದ್ದು ಏಕೆ ಗೊತ್ತೆ? ಈ ಲೋಕವೂ, ಪರಲೋಕವೂ ಸರ್ವಭೂತಗಳೂ ಇದರಿಂದಲೇ ಪೋಣಿಸಲ್ಪಟ್ಟು,

ಅವಯವಗಳ ಸ್ಥಾನದಲ್ಲಿ ಗಟ್ಟಿಯಾಗಿ ನಿಂತಿರುತ್ತವೆ. ಹೀಗಾಗಿ ಇದಕ್ಕೆ ಸೂತ್ರ ಎಂದು ಕರೆಯುತ್ತಾರೆ.

''ಸಾಧಾರಣ ಜಗತ್ತಿನ ಒಂದು ಉದಾಹರಣೆಯನ್ನು ಇದಕ್ಕೆ ನೀಡಬಹುದು. ಸಾಧಾರಣ ಜನರಿಗೂ ಈ ಬಗ್ಗೆ ಅರಿವು ಇದ್ದೇ ಇರುತ್ತದೆ. ಹಾಗೆಂದೇ, ಸತ್ತ ಮನುಷ್ಯನನ್ನು ನೋಡುವಾಗ, ಅವನ ಅಂಗಗಳು ಸಡಲಿಸಿಕೊಂಡಿವೆ ಎಂದು ಹೇಳುವರು. ಸೂತ್ರವಿಲ್ಲದಿದ್ದರೆ ಏನಾಗುತ್ತದೆ? ಹಾರದಲ್ಲಿ ಪೋಣಿಸಿದ ರತ್ನಗಳೇ ಮುಂತಾದವು ಅದರ ದಾರವನ್ನು ಬಿಚ್ಚಿದಾಗ, ಚೆಲ್ಲಿಹೋಗುತ್ತವೆ, ಅಲ್ಲವೆ? ಅದೇ ರೀತಿ ದೇಹದಲ್ಲಿರುವ ಸೂತ್ರಪ್ರಾಯವಾದ ವಾಯುವು ಹೊರಟುಹೋದರೆ, ಅಂಗಗಳೆಲ್ಲ ಸಡಿಲಗೊಳ್ಳುವವು. ಇದನ್ನೇ ಸಮಷ್ಟಿ ದೃಷ್ಟಿಯಿಂದ ನೋಡಿದಾಗ, ಈ ಜಗತ್ತಿನ ಎಲ್ಲ ಲೋಕಗಳನ್ನೂ ಹಿಡಿದಿಟ್ಟಿರುವುದು ಸೂತ್ರವೇ ಎಂದು ಗೋಚರವಾಗುವುದು.''

ಇದನ್ನು ಕೇಳಿ ಉದ್ದಾಲಕ ಆರುಣಿಗೆ ಬಹಳ ಸಂತೋಷವಾಯಿತು. ''ಯಾಜ್ಞವಲ್ಕ್ಯನೇ, ನೀನು ಹೇಳಿದ್ದು ಸರಿ. ಸೂತ್ರವನ್ನು ಸರಿಯಾಗಿ ಹೇಳಿದ್ದೀಯೆ. ಈಗ ಸೂತ್ರದ ಒಳಗಿರುವ, ಸೂತ್ರದ ನಿಯಂತೃವಾಗಿರುವ ಅಂತರ್ಯಾಮಿ ತತ್ತ್ವದ ಬಗ್ಗೆ ಹೇಳು'' ಎಂದು ಅವನು ಸವಾಲು ಹಾಕಿದನು.

### ಅಂತರ್ಯಾಮಿ ಎಂದರೇನು?

ಯಾಜ್ಞವಲ್ಕ್ಯನು ಅಂತರ್ಯಾಮಿಯನ್ನು ಉಪದೇಶಿಸಲು ಆರಂಭಿಸಿದನು: ''ಇವನ ಉಪದೇಶವು ಅಧಿದೈವತ ಉಪದೇಶದಿಂದ ಆರಂಭವಾಗುತ್ತದೆ. ಅಧಿದೈವತ ಎಂದರೆ ದೇವತೆಗಳಿಗೆ ಸಂಬಂಧಿಸಿದ್ದು. ಜಗತ್ತಿನ ಪ್ರತಿಯೊಂದು ಜಡ ಪದಾರ್ಥಕ್ಕೂ ದೇವತೆಗಳೇ ಅಧಿಷ್ಠಾತೃಗಳು ಎನ್ನುವ ಸಿದ್ಧಾಂತವೇ ಅಧಿದೈವತ ತತ್ತ್ವ. ಉದಾಹರಣೆಗೆ ಜಡಪದಾರ್ಥವಾದ ಪೃಥಿವಿಗೆ ಪ್ರೇರಣಾದಾಯಕವಾಗಿ ಪೃಥಿವೀ ದೇವತೆಯಿರುತ್ತದೆ. ಇದೇ ವಿಧಾನವನ್ನು ಉಳಿದೆಲ್ಲ ಜಡಪದಾರ್ಥಗಳಿಗೂ ಅನ್ವಯಿಸಿಕೊಳ್ಳಬೇಕು.

''ಅಂತರ್ಯಾಮಿಯೆಂದರೆ ಭೂಮಿಯಲ್ಲಿ ಇರುವಂಥದ್ದು. ಆದರೆ ಅದು ಪೃಥಿವಿಯ ಒಳಗಿರುವಂಥದ್ದು. ಒಳಗಿರುವುದು ಮಾತ್ರವಲ್ಲ, ಇವನು ಪೃಥಿವಿಯ ಒಳಗಿದ್ದು ಪೃಥಿವಿಯನ್ನು ಆಳುತ್ತಿರುತ್ತಾನೆ. ಅವನ ಅಸ್ತಿತ್ವವನ್ನು ಪೃಥಿವಿಯು ಅರಿಯದು. ಪೃಥಿವಿಯ ಅಂತರ್ಯಾಮಿಯಾಗಿರುವ ಅವನಿಗೆ ಬೇರೆ ಶರೀರವಿಲ್ಲ, ಪೃಥಿವಿಯೇ ಶರೀರ. ಆ ಅಂತರ್ಯಾಮಿಯೇ ನಿನ್ನ ಆತ್ಮನೂ ಕೂಡ. ಅವನಿಗೆ ಮರಣವಿಲ್ಲ, ಅವನು ಅಮೃತನಾದವನು.''

ಇದೇ ರೀತಿ ಹಲವಾರು ನಿದರ್ಶನಗಳನ್ನು ಯಾಜ್ಞವಲ್ಕ್ಯನು ನೀಡುತ್ತಾನೆ:

''ಅಂತರ್ಯಾಮಿಯೆಂದರೆ ಅಗ್ನಿಯಲ್ಲಿ ಇರುವಂಥದ್ದು. ಆದರೆ ಅದು ಅಗ್ನಿಯ ಒಳಗಿರುವಂಥದ್ದು. ಒಳಗಿರುವುದು ಮಾತ್ರವಲ್ಲ, ಇವನು ಅಗ್ನಿಯ ಒಳಗಿದ್ದು ಅಗ್ನಿಯನ್ನು ಆಳುತ್ತಿರುತ್ತಾನೆ. ಅವನ ಅಸ್ತಿತ್ವವನ್ನು ಅಗ್ನಿಯು ಅರಿಯದು. ಅಗ್ನಿಗೆ ಅಂತರ್ಯಾಮಿಯಾಗಿರುವ ಅವನಿಗೆ ಬೇರೆ ಶರೀರವಿಲ್ಲ, ಅಗ್ನಿಯೇ ಶರೀರ. ಆ ಅಂತರ್ಯಾಮಿಯೇ ನಿನ್ನ ಆತ್ಮನೂ ಕೂಡ. ಅವನಿಗೆ ಮರಣವಿಲ್ಲ, ಅವನು ಅಮೃತನಾದವನು.

''ಅಂತರ್ಯಾಮಿಯೆಂದರೆ ಅಂತರಿಕ್ಷದಲ್ಲಿ ಇರುವಂಥದ್ದು. ಆದರೆ ಅದು ಅಂತರಿಕ್ಷದ ಒಳಗಿರುವಂಥದ್ದು. ಒಳಗಿರುವುದು ಮಾತ್ರವಲ್ಲ, ಇವನು ಅಂತರಿಕ್ಷದ ಒಳಗಿದ್ದು ಅಂತರಿಕ್ಷವನ್ನು ಆಳುತ್ತಿರುತ್ತಾನೆ. ಅವನ ಅಸ್ತಿತ್ವವನ್ನು ಅಂತರಿಕ್ಷವು ಅರಿಯದು. ಅಂತರಿಕ್ಷದ ಅಂತರ್ಯಾಮಿಯಾಗಿರುವ ಅವನಿಗೆ ಬೇರೆ ಶರೀರವಿಲ್ಲ, ಅಂತರಿಕ್ಷವೇ ಶರೀರ. ಆ ಅಂತರ್ಯಾಮಿಯೇ ನಿನ್ನ ಆತ್ಮನೂ ಕೂಡ. ಅವನಿಗೆ ಮರಣವಿಲ್ಲ, ಅವನು ಅಮೃತನಾದವನು.

''ಹೀಗೆ ವಾಯು, ದ್ಯುಲೋಕ (ಸ್ವರ್ಗ ಮತ್ತು ಭೂಮಿಗಳ ನಡುವೆ ಇರುವಂಥದ್ದು), ಆದಿತ್ಯ, ದಿಕ್ಕುಗಳು, ಚಂದ್ರತಾರಕಗಳು, ಆಕಾಶ, ತಮಸ್ಸು, ತೇಜಸ್ಸು - ಇವೆಲ್ಲದರ ಒಳಗೆ ಪರಮಾತ್ಮನು ಅಂತರ್ಯಾಮಿಯಾಗಿ ಇದ್ದಾನೆ'' ಎಂದು ಯಾಜ್ಞವಲ್ಕ್ಯನು ಉಪದೇಶಿಸುತ್ತಾನೆ.

ಇನ್ನು ಅಧಿಭೂತದಲ್ಲೂ ಅಂತರ್ಯಾಮಿಯೇ ಇರುವನು ಎಂದು ಯಾಜ್ಞವಲ್ಕ್ಯನು ಉಪದೇಶಿಸುತ್ತಾನೆ: ''ಅಧಿಭೂತ ಎಂದರೆ ಜಗತ್ತಿನ ಮೂಲಕಣಗಳಾದ ಪಂಚಭೂತಗಳು. ಈ ದೃಷ್ಟಿಯಿಂದ ನೋಡಿದರೆ, ಅಂತರ್ಯಾಮಿಯು ಎಲ್ಲ ಭೂತಗಳಲ್ಲಿಯೂ ಇರುತ್ತಾನೆ. ಎಲ್ಲ ಭೂತಗಳ ಒಳಗಿದ್ದರೂ, ಯಾವ ಭೂತವೂ ಅವನನ್ನು ಅರಿಯವು. ಆ ಅಂತರ್ಯಾಮಿಗೆ ಎಲ್ಲ ಭೂತಗಳೂ ಶರೀರಗಳು. ಅವನು ಎಲ್ಲ ಭೂತಗಳನ್ನೂ ಅವುಗಳ ಒಳಗಿದ್ದು ಆಳುತ್ತಿರುತ್ತಾನೆ. ಅವನೇ ನಿನ್ನ ಆತ್ಮನೂ ಕೂಡ, ಅವನಿಗೆ ಮರಣವಿಲ್ಲ, ಅವನು ಅಮೃತನಾದವನು.''

ಇನ್ನು ಅಧ್ಯಾತ್ಮ ದೃಷ್ಟಿಯಲ್ಲಿ ಅಂತರ್ಯಾಮಿಯ ಉಪದೇಶವನ್ನು ಯಾಜ್ಞವಲ್ಕ್ಯನು ಮಾಡುತ್ತಾನೆ. ''ಅಧ್ಯಾತ್ಮವೆಂದರೆ ದೇಹಕ್ಕೆ ಸಂಬಂಧಪಟ್ಟ ಅಂಗಗಳು, ಪ್ರಾಣಗಳು ಮುಂತಾದವು. ಅವುಗಳಲ್ಲಿಯೂ ಪರಮಾತ್ಮನಾದ ಅಂತರ್ಯಾಮಿಯೇ ಅಡಗಿದ್ದಾನೆ''' ಎಂದು ಯಾಜ್ಞವಲ್ಕ್ಯನು ಉಪದೇಶಮಾಡುತ್ತಾನೆ.

''ಅಂತರ್ಯಾಮಿಯೆಂದರೆ ಪ್ರಾಣದಲ್ಲಿ ಇರುವಂಥದ್ದು. ಆದರೆ ಅದು ಪ್ರಾಣದ ಒಳಗಿರುವಂಥದ್ದು. ಒಳಗಿರುವುದು ಮಾತ್ರವಲ್ಲ, ಇವನು ಪ್ರಾಣದ ಒಳಗಿದ್ದು ಪ್ರಾಣವನ್ನು ಆಳುತ್ತಿರುತ್ತಾನೆ. ಅವನ ಅಸ್ತಿತ್ವವನ್ನು ಪ್ರಾಣವು ಅರಿಯದು. ಪ್ರಾಣದ ಅಂತರ್ಯಾಮಿಯಾಗಿರುವ ಅವನಿಗೆ ಬೇರೆ ಶರೀರವಿಲ್ಲ, ಪ್ರಾಣವೇ ಶರೀರ. ಆ ಅಂತರ್ಯಾಮಿಯೇ ನಿನ್ನ ಆತ್ಮನೂ ಕೂಡ. ಅವನಿಗೆ ಮರಣವಿಲ್ಲ, ಅವನು ಅಮೃತನಾದವನು.

‘‘ಹೀಗೆ ವಾಕ್ಕು (ಮಾತು), ಚಕ್ಷು, ಶ್ರೋತ್ರ, ಮನಸ್ಸು, ಚರ್ಮ, ಬುದ್ಧಿ, ರೇತಸ್ಸು – ಇವೆಲ್ಲದರ ಒಳಗಿದ್ದು ಆಳುತ್ತಿರುವವನು ಅಂತರ್ಯಾಮಿ ಎಂದೆನಿಸಿದ ಪರಮಾತ್ಮನೇ ’’ ಎಂದು ಯಾಜ್ಞವಲ್ಕ್ಯನು ಉಪದೇಶ ಮಾಡುತ್ತಾನೆ.

ಕಡೆಯಲ್ಲಿ ಅಂತರ್ಯಾಮಿಯ ಲಕ್ಷಣವನ್ನು ಸುಂದರವಾದ ಈ ಪದಗಳಿಂದ ಯಾಜ್ಞವಲ್ಕ್ಯನು ಉಪದೇಶಿಸುತ್ತಾನೆ:

**‘‘ಅದೃಷ್ಟೋ ದೃಷ್ಟಾ, ಅಶ್ರುತಃ ಶ್ರೋತಾ, ಅಮತಃ ಮಂತಾ, ಅವಿಜ್ಞಾತಃ ವಿಜ್ಞಾತಾ, ನ ಅನ್ಯಃ ಅತಃ ಅಸ್ತಿ ದೃಷ್ಟಾ, ನ ಅನ್ಯಃ ಅಸ್ತಿ ಶ್ರೋತಾ, ನ ಅನ್ಯಃ ಅಸ್ತಿ ಮಂತಾ, ನ ಅನ್ಯಃ ಅಸ್ತಿ ವಿಜ್ಞಾತೃ, ಏಷ ತೇ ಅಂತರ್ಯಾಮಿ, ಅಮೃತಃ, ಅತಃ ಅನ್ಯದಾರ್ತಂ’’**

‘‘ಈ ಅಂತರ್ಯಾಮಿಯೇ ನಿಜವಾಗಿ ನೋಡುವವನು, ಅವನನ್ನು ಯಾರೂ ನೋಡಲಾರರು; ಅವನಿಗಿಂತ ನೋಡುವವನು ಬೇರೆ ಯಾರೂ ಇಲ್ಲ; ಇವನೇ ನಿಜವಾಗಿ ಕೇಳುವವನು, ಅವನನ್ನು ಯಾರೂ ಕೇಳಿಸಿಕೊಳ್ಳಲಾರರು, ಅವನಿಗಿಂತ ಕೇಳುವವನು ಬೇರೆ ಯಾರೂ ಇಲ್ಲ ; ಅವನೇ ನಿಜವಾಗಿ ಅರಿತುಕೊಳ್ಳುವವನು, ಅವನನ್ನು ಯಾರೂ ಅರಿತುಕೊಳ್ಳಲಾರರು, ಅವನಿಗಿಂತ ಬೇರೆಯಾಗಿ ಅರಿತುಕೊಳ್ಳುವವನು ಯಾರೂ ಇಲ್ಲ. – ಇವನೇ ನಿನ್ನ ಅಂತರ್ಯಾಮಿ, ಅಮೃತನಾದವನು; ಇದಕ್ಕಿಂತ ಭಿನ್ನವಾದುದೆಲ್ಲವೂ ವಿನಾಶಿಯಾದದ್ದು; ನಾಶವಾಗುವುದು.’’

ಇದನ್ನು ಕೇಳಿದ ಉದ್ದಾಲಕ ಆರುಣಿಯು ವಾದದಿಂದ ಹಿಂಜರಿದನು.

‘‘ವೇದಾಂತ ತತ್ತ್ವದ ಆಚಾರ್ಯಶ್ರೇಷ್ಠರೇ ಶ್ರೀ ಶಂಕರಾಚಾರ್ಯರು. ಅವರು ಶುದ್ಧ ಯುಕ್ತಿಯ ಸಹಾಯದಿಂದ ವೇದಗಳಿಂದ ವೇದಾಂತ ತತ್ತ್ವಗಳನ್ನು ಕಡೆದು, ಅದರ ಆಧಾರದ ಮೇಲೆ ಅದ್ಭುತವಾದ ಜ್ಞಾನಸೌಧವನ್ನು ಕಟ್ಟಿ, ಅದನ್ನು ತಮ್ಮ ಭಾಷ್ಯದಲ್ಲಿ ಬೋಧಿಸಿರುವರು. ಬ್ರಹ್ಮವನ್ನು ಕುರಿತಾಗಿ ಇರುವ ಹಲವು ಪರಸ್ಪರ ವಿರೋಧವಾದ ಅಭಿಪ್ರಾಯಗಳನ್ನು ಒಂದುಗೂಡಿಸಿ, ಇರುವುದೊಂದೇ ಅನಂತ ಸತ್ಯವೆಂಬುದನ್ನು ತೋರಿರುವರು. ವ್ಯಕ್ತಿಯು ತನ್ನ ಊರ್ಧ್ವಮುಖ ಗಮನದಲ್ಲಿ ನಿಧಾನವಾಗಿ ಮುಂದುವರಿಯಬೇಕಾಗಿರುವುದರಿಂದ, ಹಲವು ರೀತಿಯ ವ್ಯಾಖ್ಯಾನಗಳೆಲ್ಲ ವಿವಿಧ ವ್ಯಕ್ತಿಗಳ ಸಾಮರ್ಥ್ಯಕ್ಕೆ ಆವಶ್ಯಕವೆಂಬುದನ್ನು ತೋರಿದರು.’’

— ಸ್ವಾಮಿ ವಿವೇಕಾನಂದ

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೬, ಪು.೫೦)


# ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ – 571216, ಕೊಡಗು ಜಿಲ್ಲೆ

Phone : 08274-298244, 249555; Email: srksevaponnampet@gmail.com
Website: www.rkmponnampet.org

## ವಸಂತ ವಿಹಾರ

**(ಬೇಸಿಗೆ ರಜದಲ್ಲಿ ಗಂಡುಮಕ್ಕಳಿಗಾಗಿ ಮೌಲ್ಯವರ್ಧನಾ ಕಾರ್ಯಾಗಾರ)**

**19.4.2020 ರಿಂದ 26.4.2020**

ಪ್ರಿಯ ಸ್ನೇಹಿತರೇ,

ಪೊನ್ನಂಪೇಟೆಯ ಆಶ್ರಮದ ಆವರಣದಲ್ಲಿ ಭಗವಾನ್ ಶ್ರೀರಾಮಕೃಷ್ಣರ ಭವ್ಯವಾದ ವಿಶ್ವಭಾವೈಕ್ಯ ಮಂದಿರವನ್ನು ನಿರ್ಮಿಸಲಾಗಿದೆ.ಈ ದೇವಾಲಯವನ್ನು ಕೇಂದ್ರಬಿಂದುವಾಗಿಟ್ಟುಕೊಂಡು, ಹಲವಾರು ಸೇವಾಕಾರ್ಯಗಳನ್ನು ಆಶ್ರಮವು ನಡೆಸುತ್ತಿದೆ. 11 ರಿಂದ 15ವರ್ಷ ವಯಸ್ಸಿನ ಶಾಲಾ ಮಕ್ಕಳಿಗಾಗಿ ‘**ವಸಂತ ವಿಹಾರ**’ ಎಂಬ ಬೇಸಿಗೆ ಶಿಬಿರವನ್ನು **19.4.2020 ರಿಂದ 26.4.2020** ರ ವರೆಗೆ ನಡೆಸಲಿದ್ದೇವೆ. ಈ ಶಿಬಿರವು ಬೆಳಗಿನಿಂದ ಸಂಜೆಯವರೆಗೆ ಇರುತ್ತದೆ. ಪರಸ್ಥಳಗಳಿಂದ ಬರುವ ಮಕ್ಕಳಿಗೆ ಆಶ್ರಮದಲ್ಲಿ ಮತ್ತು ಹತ್ತಿರದಕೆಲವು ಆವಾಸಿ ಶಾಲೆಗಳಲ್ಲಿ ತಂಗುವ ವ್ಯವಸ್ಥೆಯನ್ನೂ ಮಾಡಲಿದ್ದೇವೆ. ಮಕ್ಕಳಿಗೆ ಯೋಗಾಸನ, ಪ್ರಾಣಾಯಾಮ, ಏಕಾಗ್ರತೆಯನ್ನು ಬೆಳೆಸಿಕೊಳ್ಳುವ ವಿಧಾನ, ವ್ಯಕ್ತಿತ್ವ ವಿಕಾಸ, ಮೌಲ್ಯಶಿಕ್ಷಣ, ಪ್ರಾರ್ಥನೆ ಮುಂತಾದವುಗಳನ್ನು ಹೇಳಿಕೊಡಲಾಗುವುದು. **Picnic** ಸಹ ಇರುತ್ತದೆ. ನಿಮ್ಮ ಮಕ್ಕಳನ್ನು ಈ ಕಾರ್ಯಕ್ರಮಕ್ಕೆ ಕಳುಹಿಸಿಕೊಡುವುದರಿಂದ ನಮ್ಮ ಸನಾತನ ಧರ್ಮದ ಮೌಲ್ಯಗಳ ಬಗ್ಗೆ ಅವರಿಗೆ ಅರಿವು ಮೂಡುತ್ತದೆ. ಸ್ವಾಮಿವಿವೇಕಾನಂದರ ಆಶಯದಂತೆ ಅವರನ್ನು ಯೋಗ್ಯ, ಉಪಯುಕ್ತ ಪ್ರಜೆಗಳನ್ನಾಗಿ ರೂಪಿಸುವುದೇ ನಮ್ಮ ಉದ್ದೇಶ.

**ಶಿಬಿರ ಶುಲ್ಕ : ವಸತಿ ರಹಿತ : ರೂ.400 / – ; ವಸತಿ ಸಹಿತ : ರೂ.800 / –** ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ : **17.4.2020**

**1) 11ರಿಂದ 15 ವರ್ಷ ವಯಸ್ಸಿನ ಗಂಡುಮಕ್ಕಳಿಗೆ ಮಾತ್ರ. 2) ಖಾಲಿ ಕಾಗದದಲ್ಲಿ ವಿದ್ಯಾರ್ಥಿಯ ಹೆಸರು, ವಯಸ್ಸು, ತರಗತಿ, ತಂದೆತಾಯಿಗಳ ಹೆಸರು, ವಿಳಾಸ, ಲ್ಯಾಂಡ್ ಫೋನ್ ಮತ್ತು ಮೊಬೈಲ್ ಫೋನ್‌ನಂಬರುಗಳನ್ನು ಬರೆದು, ಡಿ.ಡಿ./ಚೆಕ್ ಮೂಲಕ ಹಣವನ್ನು ‘ಶ್ರೀರಾಮಕೃಷ್ಣ ಶಾರದಾಶ್ರಮ, ಪೊನ್ನಂಪೇಟೆ’ ಎಂಬ ಹೆಸರಿನಲ್ಲಿ ಕಳುಹಿಸಿರಿ.**
RTGS**ಗಾಗಿ ಬ್ಯಾಂಕ್ ವಿವರಗಳು:** Sri Ramakrishna Sharadashrama, Ponnampet. SB. A/c.no.520101041841472. IFSC Code : CORP0000032 **(ಹಾಗೂ, ಪತ್ರಅಥವಾ ಇಮೇಲ್ ಮೂಲಕ ವಿವರಗಳನ್ನು ತಿಳಿಸಿರಿ.)**

ಪ್ರೀತಿ ಮತ್ತು ಶುಭಾಶಯಗಳೊಂದಿಗೆ,
**ಭಗವತ್ಸೇವೆಯಲ್ಲಿ ತಮ್ಮವ**
**ಸ್ವಾಮಿ ಬೋಧಸ್ವರೂಪಾನಂದ**
ಅಧ್ಯಕ್ಷರು